# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1620 |
| 2. | ಸದಸ್ಯರ ಹೆಸರು | : | ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) |
| 3. | ಉತ್ತರಿಸುವ ದಿನಾಂಕ | : | 18-03-2021 |
| 4. | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಮಹಾನಗರದ ಮೈಸೂರು ರಸ್ತೆ ಮತ್ತು ವಳಗೇರಹಳ್ಳಿ/ದುಬಾಸಿ ಪಾಳ್ಯ ಸಂಪರ್ಕ ಸಾಧಿಸುವ ರಸ್ತೆಯಲ್ಲಿ ರೈಲು ಕ್ರಾಸಿಂಗ್‌ನಲ್ಲಿ ಸಾರ್ವಜನಿಕರ ಸುರಕ್ಷಿತ ಮುಕ್ತ ವಾಹನ ಸಂಚಾರಕ್ಕಾಗಿ ರೈಲು ಮೇಲುಸೇತುವೆ (RUB) ಅಥವಾ ರೈಲು ಕೆಳಸೇತುವೆ (ROB) ನಿರ್ಮಾಣ ಮಾಡಲು ಉದ್ದೇಶಿಸಿ, ತದನಂತರ ಬಿ.ಬಿ.ಎಂ.ಪಿ ಹಿಂದೆ ಸರಿಯಲು ಇರುವ ಕಾರಣಗಳೇನು; (ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೈಸೂರು ರಸ್ತೆಯಿಂದ ವಳಗೇರಹಳ್ಳಿ / ದುಬಾಸಿ ಪಾಳ್ಯ ಸಂಪರ್ಕ ಸಾಧಿಸುವ ರಸ್ತೆಯ ರೈಲ್ವೆ ಲೈನ್ ಕಿ.ಮೀ 11/100-200 ಸರಪಳಿಯ ಲೆವೆಲ್ ಕ್ರಾಸಿಂಗ್ ಸಂಖ್ಯೆ-10ರಲ್ಲಿ ಸಾರ್ವಜನಿಕರ ಮತ್ತು ಸುರಕ್ಷಿತ ಮುಕ್ತ ವಾಹನ ಸಂಚಾರಕ್ಕಾಗಿ ನೈರುತ್ಯ ರೈಲ್ವೆ ಇಲಾಖೆಯ ಸಹಯೋಗದಲ್ಲಿ ನಿರ್ಮಾಣ ವೆಚ್ಚವನ್ನು ಶೇಕಡ 50:50 ಅನುಪಾತದಲ್ಲಿ ಮತ್ತು ಭೂಸ್ವಾಧೀನ ವೆಚ್ಚವನ್ನು ಪಾಲಿಕೆ / ಸರ್ಕಾರ ಭರಿಸುವ ಮಾದರಿಯಲ್ಲಿ ರೈಲ್ವೆ ಕೆಳಸೇತುವೆಯನ್ನು (RUB) ನಿರ್ಮಿಸಲು ಕ್ರಮ ಕೈಗೊಳ್ಳಲಾಗಿತ್ತು.<br><br>ಆದರೆ, ರೈಲ್ವೆ ಕೆಳಸೇತುವೆ (RUB) ನಿರ್ಮಾಣದೊಂದಿಗೆ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಖಾಸಗಿ ಸ್ವತ್ತಿನ ಅವಶ್ಯಕತೆಯಿದ್ದು, ಭೂಸ್ವಾಧೀನವನ್ನು ಟಿ.ಡಿ.ಆರ್ ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಿದ್ದ ಸಂದರ್ಭದಲ್ಲಿ ಭೂ ಮಾಲೀಕರು ಟಿ.ಡಿ.ಆರ್ ಯೋಜನೆಯನ್ನು ತಿರಸ್ಕರಿಸಿ, ನಗದು ರೂಪದಲ್ಲಿ ಭೂ-ಪರಿಹಾರ ನೀಡಲು ಬೇಡಿಕೆ ಇಟ್ಟಿದ್ದರಿಂದ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಮುಂದುವರೆದು, ಪಾಲಿಕೆಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ನಗದು ರೂಪದಲ್ಲಿ ಭೂ-ಪರಿಹಾರ ನೀಡಿ ಭೂಸ್ವಾಧೀನ ಕೈಗೊಳ್ಳುವುದು ಕಷ್ಟಸಾಧ್ಯವಾಗಿರುವುದರಿಂದ ಟಿ.ಡಿ.ಆರ್ ಯೋಜನೆಗೆ ಭೂಮಾಲೀಕರನ್ನು ಒಪ್ಪಿಸಲು ಬಿಬಿಎಂಪಿ ವತಿಯಿಂದ ಕ್ರಮಕೈಗೊಳ್ಳಲಾಗುತ್ತಿದೆ. |

. . .2/-

| | | |
|---|---|---|
| ಆ | ದೈನಂದಿನವಾಗಿ ಸದರಿ ರೈಲು ಕ್ರಾಸಿಂಗ್‌ನಲ್ಲಿ ಕಿಲೋಮೀಟರ್‌ಗಟ್ಟಲೆ ವಾಹನಗಳ ಸಂಚಾರ ದಟ್ಟಣೆ ಉಂಟಾಗಿ ಸಾರ್ವಜನಿಕರಿಗೆ ಮತ್ತು ಸ್ಥಳೀಯರಿಗೆ ಕಿರಿಕಿರಿಯಾಗುತ್ತಿರುವ ವಿಷಯ ಕುರಿತು ಸರ್ಕಾರದ ಕ್ರಮವೇನು; (ವಿವರ ನೀಡುವುದು) | ಮೈಸೂರು ರಸ್ತೆಯಿಂದ ವಳಗೇರಹಳ್ಳಿ / ದುಬಾಸಿ ಪಾಳ್ಯ ಸಂಪರ್ಕ ಸಾಧಿಸುವ ರಸ್ತೆಯ ರೈಲ್ವೆ ಲೈನ್ ಕಿ.ಮೀ 11/100–200 ಸರಪಳಿಯ ಲೆವೆಲ್ ಕ್ರಾಸಿಂಗ್ ಸಂಖ್ಯೆ–10ರಲ್ಲಿ ಸಾರ್ವಜನಿಕರ ಮತ್ತು ಸುರಕ್ಷಿತ ಮುಕ್ತ ವಾಹನ ಸಂಚಾರಕ್ಕಾಗಿ ನೈರುತ್ಯ ರೈಲ್ವೆ ಇಲಾಖೆಯ ಸಹಯೋಗದಲ್ಲಿ ನಿರ್ಮಾಣ ವೆಚ್ಚವನ್ನು ಶೇಕಡ 50:50 ಅನುಪಾತದಲ್ಲಿ ಮತ್ತು ಭೂಸ್ವಾಧೀನ ವೆಚ್ಚವನ್ನು ಪಾಲಿಕೆ / ಸರ್ಕಾರ ಭರಿಸುವ ಮಾದರಿಯಲ್ಲಿ ರೈಲ್ವೆ ಕೆಳಸೇತುವೆಯನ್ನು (RUB) ನಿರ್ಮಿಸಲು ಕ್ರಮಕೈಗೊಂಡಿದ್ದು, ಸರ್ಕಾರವು 2017–18ನೇ ಸಾಲಿನಲ್ಲಿ ಬೆಂಗಳೂರಿಗೆ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಯೋಜನೆಯಡಿ ರೂ.16.00 ಕೋಟಿಗಳ ಅನುದಾನವನ್ನು ಮೀಸಲಿರಿಸಿ ಅನುಮೋದನೆ ನೀಡಿರುತ್ತದೆ.<br><br>ರೈಲ್ವೆ ಕೆಳಸೇತುವೆ (RUB) ನಿರ್ಮಾಣದೊಂದಿಗೆ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಖಾಸಗಿ ಸ್ವತ್ತಿನ ಅವಶ್ಯವಿದ್ದು, ಭೂ ಮಾಲೀಕರು ಟಿ.ಡಿ.ಆರ್ ಯೋಜನೆಗೆ ಒಪ್ಪದೇ ಹಣ ಭೂ–ಪರಿಹಾರ ನೀಡಲು ಬೇಡಿಕೆ ಇಟ್ಟಿರುವುದರಿಂದ ಮತ್ತು ಪಾಲಿಕೆಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ನಗದು ರೂಪದಲ್ಲಿ ಭೂ–ಪರಿಹಾರ ನೀಡಿ ಭೂಸ್ವಾಧೀನ ಕೈಗೊಳ್ಳುವುದು ಕಷ್ಟಸಾಧ್ಯವಾಗಿದ್ದು, **“ಟಿ.ಡಿ.ಆರ್ ಯೋಜನೆಗೆ ಭೂಮಾಲೀಕರನ್ನು ಒಪ್ಪಿಸಲು ಕ್ರಮವಹಿಸುತ್ತಿದ್ದು”** ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ನೈರುತ್ಯ ರೈಲ್ವೆ ಸಹಯೋಗದಲ್ಲಿ ರೈಲ್ವೆ ಕೆಳಸೇತುವೆ ನಿರ್ಮಿಸಲು ಕ್ರಮಕೈಗೊಳ್ಳಲಾಗುತ್ತದೆ. |
| ಇ | ಸದರಿ ರೈಲು ಕ್ರಾಸಿಂಗ್‌ನಲ್ಲಿ ಸುರಕ್ಷಿತ ಸಾರ್ವಜನಿಕ ಸಂಚಾರಕ್ಕಾಗಿ ರೈಲು ಮೇಲು ಸೇತುವೆ (RUB) ಅಥವಾ ರೈಲು ಕೆಳಸೇತುವೆ (ROB) ನಿರ್ಮಾಣ ಮಾಡಲು ಭಾರತೀಯ ರೈಲು ನಿಗಮದೊಡನೆ ಯಾವುದಾದರೂ ಒಪ್ಪಂದ ಅಥವಾ ಒಡಂಬಡಿಕೆ ಏರ್ಪಟ್ಟಿದೆಯೇ; ಒಪ್ಪಂದವಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ರೈಲು ಮೇಲುಸೇತುವೆ (RUB) ಅಥವಾ ರೈಲು ಕೆಳಸೇತುವೆ (ROB) ನಿರ್ಮಾಣ ಮಾಡಲು ಸರ್ಕಾರ ಚಿಂತಿಸಿದೆ? (ವಿವರ ನೀಡುವುದು) | |

**ಸಂಖ್ಯೆ: ನಅಇ 83 ಎಂಎನ್‌ವೈ 2021 (ಇ)**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ